Administration of Sathyamma Temple at Soundathi, Belgaum District.

757. SRI G. K. TAKKED (Parasgad).—Will the Chief Minister be pleased to state.—

(*a*) who is looking after the administration of Sri Sathyamma temple at Soundathi in Belgaum district;

(*b*) the facilities provided by the authorities of this temple to the priests ;

(*c*) whether it has come to the notice of the Government that hardship is caused to devotees due to auctioning of temple produce;

(*d*) whether it has come to the notice of the Government that hardship is being caused to the devotees due to Mukthedari system in this temple and whether the money recovered by Mukthedars is in accordance with the rules ;

(*e*) whether the Government intend to take over the administration of Sri Sathyamma temple ?

SRI D. DEVARAJ URS (Chief Minister).—

(*a*) The administration of Sri Sathyamma (Sri Jogeswari) temple in Soundathi village of Belgaum district is under the perview of Sri Navalagunda Shirasangi Trust Fund, Belgaum. The administration of this temple is looked after by a Committee consisting of 8 members as per the Bombay Education Department resolution No. 3768 dated 28th April 1928. The Deputy Commissioner of Belgaum district is the *ex-officio* Chairman of this Committee.

(*b*) Charges for each pooja has been fixed according to the rules of the Trust. Out of these collections some portion of the money is being given to the priests.

(*c*) No.

(*d*) No. Mukthedars are collecting the amount fixed by the Trust in accordance with the terms of auction.

(*e*) No.

ಶ್ರೀ ಜಿ. ಕೆ. ತಕ್ಕೇಡ್.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಬೆಳಗಾವಿ ಜಿಲ್ಲೆಯಲ್ಲಿರುವ ಸವದತ್ತಿ ಗ್ರಾಮದ ಶ್ರೀ ಸತ್ಯಮ್ಮ (ಶ್ರೀ ಜೋಗೇಶ್ವರಿ) ದೇವಸ್ಥಾನವು ಶ್ರೀ ನವಲಗುಂದ ಶಿರಸಂಗಿ ಟ್ರಸ್ಟ್ ಫಂಡ್, ಬೆಳಗಾವಿ ಈ ಸಂಸ್ಥೆಗೆ ಒಳಪಡುತ್ತದೆ. ಇದರ ಆಡಳಿತವನ್ನು ಮುಂಬೈ ಸರ್ಕಾರದ ವಿದ್ಯಾಖಾತೆಯ ಠರಾವ್ ನಂ. ೩೭೬೮ ದಿನಾಂಕ ೨೪-೪-೧೯೨೮ ಕ್ಕೆ ಆದ ಘಟನೆಯ ಪ್ರಕಾರ ೮ ಜನರುಳ್ಳ ಕಮಿಟಿಯು ನೋಡುತ್ತದೆ. ಬೆಳಗಾವಿ ಜಿಲ್ಲಾಧಿಕಾರಿಗಳವರು ಈ ಕಮಿಟಿಯ ಎಕ್ಸ್ ಅಫಿಷಿಯೋ ಅಧ್ಯಕ್ಷರಿರುತ್ತಾರೆ ಎಂದು ತಾವು ಹೇಳಿದ್ದೀರಿ. ಆದರೆ ೧೯೨೮ನೇ ಇಸವಿಯ ವಿದ್ಯಾ ಇಲಾಖೆಯ ಠರಾವ್ ೧೯೫೦ನೇ ಇಸವಿಯಲ್ಲಿ ಮುಂಬಯಿ ಪಬ್ಲಿಕ್ ಟ್ರಸ್ಟ್ ಆಕ್ಟ್ ಬಂದ ಮೇಲೆ ರದ್ದು ಪಡಿಸಲ್ಪಟ್ಟಿದೆ. ಇದುವರೆಗೆ ಮುಜರಾಯಿ ಖಾತೆಯಾಗಲೀ ಅಥವಾ ಸರ್ಕಾರವಾಗಲೀ ಈ ಬಗ್ಗೆ ಲಕ್ಷ್ಯ

ಕೊಟ್ಟಿಲ್ಲ. ೧೯೫೦ರ ಮುಂಬಯಿ ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ಆ ದೇವಸ್ಥಾನ ರಿಜಿಸ್ಟರ್ ಆಗಬೇಕಂ ಮತ್ತು ಆದರ ಆಡಳಿತ ಮುಜರಾಯಿ ಖಾತೆಗೆ ಒಳಪಡಬೇಕು. ಅಲ್ಲದೇ ಕಮಿಟಿಯವರು ಇಲ್ಲಿಯವರೆಗೆ ವಸೂಲು ಮಾಡಿರತಕ್ಕಂಥ ಸುಮಾರು ೧ ಕೋಟಿ ರೂಪಾಯಿಗಳಷ್ಟು ಹಣವನ್ನು ಖಾಸಗಿ ಸ್ವತ್ತಿನ ರೀತಿ ಯಲ್ಲಿ ಇಟ್ಟುಕೊಂಡು ಬಂದಿದ್ದಾರೆ. ಆ ಹಣದಲ್ಲಿ ಚೌಲ್ಟರಿಯನ್ನು ಕಟ್ಟಿಲ್ಲ, ಆ ದೇವಸ್ಥಾನಕ್ಕಾಗಿ ಖರ್ಚು ಮಾಡಿಲ್ಲ; ಮತ್ತು ಈ ಸಮಾಜದ ಹರಿಜನ ವರ್ಗಕ್ಕೆ ಆ ಹಣ ಏನು ಮುಟ್ಟಬೇಕಾಗಿತ್ತೋ ಆದು ಅವರಿಗೆ ಮುಟ್ಟುತ್ತಾ ಇಲ್ಲ. ಆದ್ದರಿಂದ ೧೯೫೦ನೇ ಇಸವಿಯ ಮುಂಬೈ ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ಅವರ ಮೇಲೆ ಯಾವ ವಿಧವಾದ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ಏತಕ್ಕೆ ?

† ಶ್ರೀ ಡಿ. ದೇವರಾಜ ಅರಸ್.— ಸ್ವಾಮೀ ಈ ಮುಂಬಯಿ ಪಬ್ಲಿಕ್ ಟ್ರಸ್ಟ್ ಆಕ್ಟ್ ೧೯೫೦ನೇ ಇಸವಿಯಿಂದ ಇರುವುದು ನಿಜ. ಈ ಆಕ್ಟ್ ಇದ್ದರೂ ಸಹ ಅವರು ಹಳೆಯ ಕಂದಾಚಾರದಿಂದ ಬಂದಿರುವುದು ನಿಜ. Now that the hon. Member has brought it to the notice of the Government, I will see action is taken.

ಶ್ರೀ ಜಿ. ಕೆ. ತಕ್ಕೆಡ್.—ಸ್ವಾಮಿ, ನನ್ನ (ಆ) ಪ್ರಶ್ನೆಗೆ ಉತ್ತರವಾಗಿ 'ಟ್ರಸ್ಟಿನ ನಿಯಮಗಳ ಪ್ರಕಾರ ಪ್ರತಿಯೊಂದು ಪೂಜಾ ವಿನಿಯೋಗಕ್ಕೆ ವಸೂಲು ಮಾಡುವ ಹಣವನ್ನು ನಿರ್ಧರಿಸ ಲಾಗಿದೆ. ಈ ಹಣದಿಂದಲೇ ಪೂಜಾರಿಗಳಿಗೆ ಕೆಲವೊಂದು ಭಾಗವನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದೀರಿ. ಈ ದೇವಸ್ಥಾನದ ಆಡಳಿತಾಧಿಕಾರಿಗಳು ಹೆಚ್ಚು ಹಣವನ್ನು ವಸೂಲು ಮಾಡುತ್ತಿದ್ದರೂ ಸಹ ಅರ್ಚಕರಿಗೆ ಸರಿಯಾದ ಸೌಕರ್ಯಗಳನ್ನು ಕೊಡುತ್ತಾ 'ಇಲ್ಲ. ಈ ಬಗ್ಗೆ ಅವರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಈ 'ದೇವಸ್ಥಾನದ ಆಸ್ತಿ ಊರಿನೊಟ್ಟಿಗೆ ಸೇರಿದ್ದರೂ ಕೂಡ ಯಾರೂ ಸರಿಯಾಗಿ ಆದರ ಬಗ್ಗೆ ಜವಾಬ್ದಾರಿ ತೆಗೆದುಕೊಂಡಿರುವುದಿಲ್ಲ, ಆದ್ದರಿಂದ ಅಲ್ಲಿ ೮ ಜನ ಮುಖ್ತೆದಾರರು ಹೆಚ್ಚಿಗೆ ಹಣವನ್ನು ವಸೂಲು ಮಾಡಿರಬಹುದು. ಈಗ ಇದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಈ ಆಕ್ಟನ್ನು ಅಪ್ಲಿಕೇಬಲ್ ಮಾಡಿಬಿಟ್ಟರೆ ಬಹುಷಃ ಅವರು ಹೇಳುತ್ತಾ ಇರತಕ್ಕಂಥ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇದು ಈಗ ನನ್ನ ಗಮನಕ್ಕೆ ಬಂದಿದೆ ಈ ಬಗ್ಗೆ ಕೂಡಲೇ ನಾನು ವಿಚಾರ ಮಾಡಿಸುತ್ತೇನೆ.

ಶ್ರೀ ಜಿ. ಕೆ. ತಕ್ಕೆಡ್.—ಈ ಪವಿತ್ರವಾದ ದೇವಸ್ಥಾನಕ್ಕೆ ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪೂಜೆಗಾಗಿ ಹೋಗುತ್ತಾರೆ. ಈ ದೇವಸ್ಥಾನವನ್ನು ಸರ್ಕಾರದವರು ತಮ್ಮ ಆಡಳಿತಕ್ಕೆ ತೆಗೆದು ಕೊಳ್ಳುವುದಕ್ಕೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ಡಿ. ದೇವರಾಜ ಅರಸ್.—ನಾನು ಆಗಲೇ ಹೇಳಿದೆನಲ್ಲಾ, ಈ ವಿಷಯ ಇದುವರೆಗೂ ನಮ್ಮ ಗಮನಕ್ಕೆ ಬರಲಿಲ್ಲ. ಈಗ ತಾವು ಹೇಳಿದ್ದೀರಿ. ಇಷ್ಟು ದಿವಸ ಎಜುಕೇಷನ್ ಡಿಪಾರ್ಟ್‌ಮೆಂಟ್ ನವರು ಮತ್ತು ಅಲ್ಲಿದ್ದವರು ಜೊತೆಯಾಗಿ ಇದ್ದರು ಎಂದು ಕಾಣುತ್ತದೆ; ದೇವರ ಗಂಟುನೋಡಿ ಎಷ್ಟಾದರೂ. ಮುಂಬೈ ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂದರೆ ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಆ ಬಗ್ಗೆ ಕ್ರಮ ತೆಗೆದುಕೊಳ್ಳ ಬಾರದು ಎಂದು ನನ್ನ ಮನಸ್ಸಿನಲ್ಲಿ ಇಲ್ಲ.

ಶ್ರೀ ವಿ. ಮಾಸಿಯಪ್ಪ.—ಸ್ವಾಮಿ, ಅಲ್ಲಿ ಹಿಂದೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರು ಮಾಡಿರತಕ್ಕ ರೆಸಲ್ಯೂಷನ್ ಪ್ರಕಾರ ಬೆಳಗಾವಿ ಡೆಪ್ಯುಟಿ ಕಮಿಷನರ್‌ರವರು ಕಮಿಟಿಯ ಎಕ್ಸ್ ಅಫಿಷಿಯೊ ಚೇರ್‌ಮನ್ ಆಗಿದ್ದಾರೆ. ಡೆಪ್ಯುಟಿ ಕಮಿಷನರ್ ಅಲ್ಲಿ ಎಕ್ಸ್‌ಅಫಿಷಿಯೋ ಚೇರ್‌ಮನ್ ಆದಮೇಲೆ ಕಾನೂನು ಪ್ರಕಾರವಾಗಿ ಹಣವನ್ನು ವಸೂಲು ಮಾಡಿರಬೇಕು; ಇದರ ಬಗ್ಗೆ ಲೆಕ್ಕಪತ್ರಗಳನ್ನು ಇಟ್ಟಿರುವುದಕ್ಕೆ ಸಾಧ್ಯವಿದೆ. ಅದರಲ್ಲಿ ಹೆಚ್ಚು ಹಣ ವಸೂಲು ಮಾಡಿ ಕಡಿಮೆ ಲೆಕ್ಕ ತೋರಿಸಿರತಕ್ಕಂಥಾದ್ದು ಇದೆ. ಈ ಬಗ್ಗೆ ತಾವು ತನಿಖೆ ನಡೆಸುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಅಲ್ಲಿ ಹೆಚ್ಚಿಗೆ ಹಣ ವಸೂಲು ಮಾಡಿ ಕಡಿಮೆ ಲೆಕ್ಕ ತೋರಿಸ ತಕ್ಕಂಥಾದ್ದು ಇದೆ ಎಂದು ತಾವು ಹೇಳಿದ್ದೀರಿ. ಆ ವಿಚಾರ ನನಗೆ ಗೊತ್ತಿರಲ್ಲಿಲ್ಲ. All that will be examined.

ಶ್ರೀ ಜಿ. ಮಾದೇಗೌಡ.-ನಮ್ಮ ಮಾನ್ಯ ಮುಖ್ಯಮಂತ್ರಿಯವರು ಇತ್ತೀಚೆಗೆ ಹಣೆಗೆ ಕುಂಕುಮ ಹಚ್ಚಿಕೊಂಡು ದೈವಭಕ್ತರಾಗುತ್ತಿದ್ದಾರೆ. ಬಹಳ ಸಂತೋಷ. ಸ್ವಾಮಿ ಗ್ರಾಮಾಂತರ ಪ್ರದೇಶಗಳಲ್ಲಿ ಯಾವಯಾವ ದೇವಸ್ಥಾನಗಳು ಇದೆ, ಆ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಕೊಡಿಗೆ ಜಮೀನುಗಳು ಪ್ರತಿಯೊಂದು ಹಳ್ಳಿಯಲ್ಲೂ ಇದೆ. ಹಿಂದಿನಿಂದಲೂ ಈ ಕೊಡಿಗೆ ಜಮೀನುಗಳಲ್ಲಿ ಪೂಜಾರಿಗಳೇ ಅರಂಭ ಮಾಡಿಕೊಂಡು ಅದರ ಫಲವನ್ನು ಅವರೇ ಅನುಭವಿಸಿಕೊಂಡು ಬರುತ್ತಿದ್ದಾರೆ, ಕೆಲವು ಗ್ರಾಮಗಳಲ್ಲಿ ಏನಾಗಿದೆ ಎಂದರೆ ಆ ದೇವಸ್ಥಾನಗಳಿಗೆ ಸೇರಿದಂಥ ಕೊಡಿಗೆ ಜಮೀನುಗಳನ್ನು ಊರಿನ ಪಂಚಶೀಲರು ಹರಾಜು ಹಾಕಿ ಊರಿನ ದೊಡ್ಡ ದೊಡ್ಡ ಜಮೀನುದಾರರು ಅದನ್ನು ಕೊಂಡುಕೊಂಡು ಅವರೇ ಅದನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಪೂಜಾರಿಗಳಿಗೆ ಸೇರಬೇಕಾದ ಕೊಡಿಗೆ ಜಮೀನುಗಳನ್ನು ಅವರಿಗೆ ಕೊಡದೇ, ಅವರಿಗೆ ಯಾವುದೇ ವರಮಾನ ಇಲ್ಲದೇ ಇರುವುದರಿಂದ ಪೂಜಾರಿಗಳು ಹಳ್ಳಿಗಳಲ್ಲಿ ಪೂಜಾ ಕೆಲಸವನ್ನು ನಿಲ್ಲಿಸಿಬಿಟ್ಟಿದ್ದಾರೆ. ಹಳ್ಳಿಗಳಲ್ಲಿ ದೇವಸ್ಥಾನಗಳು ಬಾಗಿಲು ಮುಚ್ಚಿವೆ. ದೇವಸ್ಥಾನಗಳಲ್ಲಿ ದೀಪ ಹಚ್ಚುವುದಕ್ಕೂ ಸಹ ಯಾರೂ ಇಲ್ಲ. ಇನ್ನೊಂದು ವಿಚಾರವೆನೆಂದರೆ ಹಳ್ಳಿಗಳಲ್ಲಿ ತೋಟಿ, ತಳವಾರರು ಇನಾಮತಿ ಜಮೀನುಗಳನ್ನು ಯಾರ್ಯಾರು ಅನುಭವಿಸುತ್ತಿದ್ದಾರೆಯೋ ಅವರ ಹೆಸರಿಗೆ ಡೆಪ್ಯುಟಿ ಕಮಿಷನರ್‌ರವರು ಖಾತೆ ಮಾಡುತ್ತಾರೆ. ಅದೇ ರೀತಿಯಲ್ಲಿ ಈ ದೇವಸ್ಥಾನಗಳಿಗೆ ಸೇರಿದಂಥ ಕೊಡಿಗೆ ಜಮೀನುಗಳನ್ನು ದೇವಸ್ಥಾನಗಳಲ್ಲಿ ಯಾರು ಪೂಜೆ ಮಾಡುತ್ತಾರೆ, ಯಾರು ಅತೀ ಬಡವರಿರುತ್ತಾರೆ, ಅಂತಹವರ ಹೆಸರಿಗೆ ಖಾತೆ ಮಾಡುವುದಕ್ಕೆ ತಾವು ಆದೇಶ ಕೊಡುತ್ತೀರಾ ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಈಗ ನಾನು ಕುಂಕುಮ ಹಚ್ಚಿಕೊಂಡು ದೈವಭಕ್ತನಾಗುತ್ತಿದ್ದೇನೆಂದು ಮಾನ್ಯ ಸದಸ್ಯರು ಹೇಳಿದರು. ನನ್ನಿಂದ ಅವರಿಗೂ ದೈವ ಭಕ್ತಿ ಬರಲಿ ಎಂದು ಹೇಳುತ್ತೇನೆ. ಅಲ್ಲದೇ I would like all of them to do likewise.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಸಂಕಟ ಬಂದಾಗ, ತೊಂದರೆಯಾದಾಗ ಅದನ್ನು ಹಣೆಗೆ ಹಚ್ಚುತ್ತೇವೆ.

ಶ್ರೀ ಡಿ. ದೇವರಾಜ ಅರಸ್.—ಅದರಲ್ಲಿ ನನಗೂ ಸಂಕಟವಿಲ್ಲ. ನಿಮಗೂ ಸಂಕಟವಿಲ್ಲ ದೈವಭಕ್ತಿ ಎನ್ನುವುದು ಬಾಹ್ಯಾಡಂಬರದಿಂದ ಬರುವುದಿಲ್ಲ. ಕುಂಕುಮ ಹಚ್ಚಿಕೊಂಡು ಗಂಟೆ ಹೊಡೆಯುವವರು ಎಷ್ಟೋ ಮಂದಿ ದೇವಸ್ಥಾನದಿಂದ ಹೊರಗೆ ಬಂದಕೂಡಲೇ ದುರಾಲೋಚನೆ ಮಾಡುತ್ತಾರೆ.

2-00 ಪಿ.ಎಂ.

ನಾನಾದರೂ ಬೂಟಾಟಿಕೆ ಮಾಡುತ್ತಿಲ್ಲ. ನನ್ನಿಂದ ಇವರಿಗೆ ದೇವರ ಮೇಲೆ ಭಕ್ತಿ ಬಂದರೆ ಸಂತೋಷ ಪಡುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ತಾವು ಯಾವ ದೇವರನ್ನು ಪೂಜೆ ಮಾಡುತ್ತಿರೋ ನಮಗೆ ಅರ್ಥವಾಗುವುದಿಲ್ಲ.

ಶ್ರೀ. ಡಿ. ದೇವರಾಜ ಅರಸ್.—ಆ ಪೂಜೆಯನ್ನು ನಿಮಗೆ ಹೇಳಿಕೊಟ್ಟರೆ, ಅದು ನಿಮಗೆ ಗೊತ್ತಾಗುವುದಿಲ್ಲ. ನಾನು ಇಷ್ಟು ಹೇಳಿದರೂ ನಿಮಗೆ ಗೊತ್ತಾಗದಿದ್ದರೆ ನಾನು ಹೇಳಿ ಏನು ಪ್ರಯೋಜನ ? ನಿಮಗೂ ಸಂದರ್ಭ ಬಂದಿತ್ತು ಇಂದಿರಾಗಾಂಧಿಯವರನ್ನು ಪೂಜೆ ಮಾಡಬೇಕೆಂದು ನೀವು ಮಾಡುತ್ತಿದ್ದಿರಿ. ಮಧ್ಯೆ ಸ್ವಲ್ಪ ಬದಲಾವಣೆಯಾಗಬಹುದೆಂದು ತಿಳಿದು ಆ ಕಡೆ ಹೊರಟು ಹೋಗಿದ್ದೀರಿ. ಮತ್ತೆ ವಾಪಸ್ಸು ಬಂದರೂ ಬರಬಹುದು. ಇದನ್ನೇ ವಿಪರೀತಕ್ಕೆ ತೆಗೆದುಕೊಂಡು ಹೋಗಬೇಡಿ. ನಮ್ಮಲ್ಲಿ ಒಂದು ಗಾದೆ ಇದೆ. ಕುಳವಾಡಿಗಳು ಕುಲವನ್ನು ಹುಡುಕಿ ಕೊಡು ಎಂದರೆ ಅವನು ಕುಲವಾಡಿಯ ಚಿಕ್ಕಪ್ಪ ಎಂದು ಹಾಗೆ.

ಶ್ರೀ ಜೆ. ಎಚ್. ಪಟೇಲ್.—ನಮಗೆ ಇಂದಿರಾಗಾಂಧಿಯವರಲ್ಲಿ ಅಥವಾ ಅವರ ಸಂತತಿಯಲ್ಲಿ ಯಾವ ಸಂಬಂಧವೂ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮನ್ನು ಅವರ ಸಂಬಂಧವನ್ನು ಇಟ್ಟುಕೊಳ್ಳಿ ಎಂದು ಯಾರು ಆರತಿ ಹಿಡಕೊಂಡು ಬಂದಿರುವವರು ? ನೀವು ಇಟ್ಟುಕೊಂಡಿರುವ ಸಂಬಂಧ ಇಟ್ಟುಕೊಳ್ಳಿ. ಡಾ॥. ಲೋಹಿಯಾ ರವರ ಸಂಬಂಧ ಇಟ್ಟುಕೊಂಡಿದ್ದೀರಿ, ಸಂತೋಷ, ನನ್ನದೇನೂ ಅಭ್ಯಂತರ ಇಲ್ಲ.

ನಾನು ಪೂಜೆ ಮಾಡುವುದನ್ನು ನೋಡಿ ನಿಮಗೆ ಯಾಕೆ ಹೊಟ್ಟೆ ಕಿಚ್ಚು ? ಅದನ್ನು ಅಷ್ಟಕ್ಕೇ ಬಿಡುತ್ತೇನೆ. ಈಗ ಇದು ಈ ಪ್ರಶ್ನೆಗೆ ಸಂಬಂಧ ಪಡದೇ ಹೋದರೂ ನಮ್ಮ ಮಾದೇಗೌಡರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ಅದರ ಬಗ್ಗೆ ತಾವು ಅವಕಾಶ ಕೊಟ್ಟರೆ ಎರಡು ಮಾತುಗಳನ್ನು ಹೇಳುತ್ತೇನೆ.

Because it is a general question and it does not arise out of the main question.

MR. SPEAKER. —It does not pertain to the main question.

ಶ್ರೀ ಮಾದೇಗೌಡ.—ಈಗ ಅಲ್ಲಿ ಸಾವಿರಾರು ಎಕರೆಗಳು... . ...

SRI D. DEVARAJ URS, —It is a general question and it does not arise out of the main question. But with your permission, I would like to say something. I think there is a Religious Inam Abolition Act and all those questions come under that Act. We are shortly bringing amendments to improve upon what the lacuna he has mentioned. We want to bring in some amendments whereby the Government's intention is to see that temples are in some way or the other are allowed to do worshipping and other th ngs which were there once in the village but which has been affected very badly as a result of this. We are trying to see that some annuity or some such thing is given if not the land and regarding the other point, what the hon. Member has stated is correct. In many instances. these Inam lands have been auctioned ; the usurps have been auctioned and those auctioned people who takes these lands are treated as tenants. We have to see that such people don't get the benefit but the actual cultivator get the benefit. We have considered all these aspects and we may bring any amendment perhaps in this Session itself.

Karnataka—Maharashtra Border issue

18. SRI MALLUR ANANDA RAO (Rajajinagar)—SRI B. V. KAKKILAYA (Vittal)-SRI PAMPAPATHI (Davanagere)—SRI S. F. BHAIRI (Shahabad)—Will the Chief Minister be pleased to state :—

(*a*) whether the Government is aware of the move by certain interested sections in Maharashtra to rake up the Karnataka-Maharashtra Border issue ;

(*b*) whether there is any change in the Policy of the Government towards this border issue ;

(*c*) what steps the Government has taken or would like to take to implement the Mahajan Commissions report ?

SRI D. DEVARAJ URS (Chief Minister).—

(*a*) No.

(*b*) No.

(*c*) It is for the Government of India to take action to implement the Mahajan Award.